ತಿಂದು ಹೊಟ್ಟೆ ನೋಯಿಸಿಕೊಳ್ಳುವುದು, ಅವ್ವ ಒಲೆ ರೊಟ್ಟಿ ಹಂಚಿನ ತಳ ಭಾಗದ ಕರೀ ಕಿಮಟಿಗೆ ಉಪ್ಪು ನೀರು ಬೆರೆಸಿ ಕುಡಿಸಿ ನೋವು ಶಮನ ಮಾಡುವುದು ಇವೆಲ್ಲ ಮಾಮೂಲಿ ನಮಗೆ ಇದ್ದದ್ದೇ. ಆರಾಮು ಆದ್ರೆ ಮತ್ತೆ ಅದೇ ಹಳೆಯ ಹೀರೋ ಸೈಕಲ್ ಏರಿ ತಿರುಗಿದ್ದೇ ತಿರುಗಿದ್ದು. ಅದೆಂತಹ ಜಿದ್ದು ಎನ್ನುತ್ತೀರಿ? ನಮ್ಮೂರಿಗೆ ನಾವೇ ಉಢಾಳರೋ ಇಲ್ಲ ಮಹಾನ್ ಸಂಭಾವಿತರೋ, ಈಗಂತೂ ಒಂದೂ ತಿಳಿಯದು. ಅಂತೂ ಊರವರ ಕಣ್ಣಲ್ಲಿ ಒಳ್ಳೆಯ ಹುಡುಗರು ನಾವು.

ಈಗ ನಾನು ಕಥೆ ಶುರು ಮಾಡುತ್ತಿರುವ ವಿಷಯವೆಂದರೆ, ಕಟ್ ಸರ್ವಿಸ್ ಬಸ್ಸೊಂದು ನಮ್ಮೂರಿಗೆ ದಿನಾ ಚಾಚೂ ತಪ್ಪದೇ ಬರುತ್ತಿತ್ತು. ದೇವರ ಮೇಲಿನ ಹೂವು ತಪ್ಪೀತು, ಆದರೆ ಈ ಕಟ್ ಸರ್ವಿಸ್ ಎಂಬೋ ಹತ್ತು ಗಂಟೆಯ ಬಸ್ಸು ಬರುವುದು ತಪ್ಪುತ್ತಿರಲಿಲ್ಲ. ಆಗ ಸರಿಯಾಗಿ ಹತ್ತು ಗಂಟೆಯ ಹೊತ್ತಿಗೆ ಹೂವಿನಹಡಗಲಿಯಿಂದ ಹೊರಟು ನಮ್ಮೂರು ಮುದೇನೂರಿಗೆ ಬರುತ್ತಿತ್ತು. ಹೊತ್ತು ನೋಡಿದರೂ ಅದೇ ಸಮಯ, ಗೌಡ್ರು ಎಚ್‌ಎಂಟಿ ವಾಚ್ ನೋಡಿದರೂ ಅದೇ ಸಮಯ. ಪಕ್ಕದ, ಊರಿಂದ ಒಂದಿಷ್ಟು ದೂರದ ಕೆಮ್ಮಣ್ಣು ಹಳ್ಳದ ಆಚೆ ಆ ಬಸ್ಸು ಬರುವ ಸೌಂಡು ಒಂದೇ ಸಮನೆ ಕಾಡಾನೆ ಗೀಳಿಟ್ಟಂತೆಯೋ, ಇಲ್ಲ ತಪ್ಪಿಸಿಕೊಂಡ ಕೊಂಬಿನೋರ ಎಮ್ಮೆ ಒದರಿದಂತೆ ಒದರುತ್ತಾ ಬರುತ್ತಿತ್ತು. ಊದುಗೊಳವೆಯಂತಹ ಹಾರ್ನ್ ಅದರ ಹಿಂದಿನ ಬಲೂನ್‌ನಂತಹ ವಸ್ತು ಅದನ್ನು ಡ್ರೈವರ್ ಅಮುಕಿದರೆ ಪೌಂ... ಪೌಂ... ಭಯಂಕರ ಶಬ್ದ. ಅದನ್ನು ಕೇಳಿದರೇ ಕಣದಲ್ಲಿದ್ದ ಎತ್ತುಗಳು ಬೆದರಿ ನಿಲ್ಲಬೇಕು. ಹಾಗಿತ್ತು ಈ ಕೆಂಪು ಮೂತಿ ಬಸ್ಸಿನ ಚರಿತ್ರೆ.

ನಮಗ್ಯಾರಿಗೂ ಇಂದಿನ ಹಾಗೆ ಡೈನೊಸಾರುಗಳ ಬಗೆಗೆ, ಡ್ರ್ಯಾಗನ್ ಸಿನಿಮಾ ಬಗೆಗೆ ಗೊತ್ತಿರಲಿಲ್ಲ. ಅಬ್ಬಾ!

